Mr. SPEAKER :- I have directed.

SRI. M. C. NANAIHA :- I think there was also a direction from the Chair yesterday. ಯಾರ ಮೇಲೆ ಕ್ರಮ ಕೈಗೊಳ್ಳಬೇಕೋ ಅದನ್ನು ಬಿಟ್ಟು ಕಡೆಗೆ ಇನ್ನೂ ಯಾರ್ಯಾರ ಮೇಲೋ ಕ್ರಮ ಕೈಗೊಂಡರು ಎಂದು ಹೇಳುತ್ತಿರತಕ್ಕಂಥ ಪ್ರಶ್ನೆ ಬಂತು. I think, I will call for the Minister and I will ask him to make a statement.

ಅಧ್ಯಕ್ಷರು :- ಜೀರೋ ಅವರನ್ನು ಹನ್ನೆರಡೂವರೆಗೆ ಪ್ರಾರಂಭ ಮಾಡಿದ್ದೇವೆ, ಒಟ್ಟು 50 ನಿಮಿಷ ಚರ್ಚೆ ಮಾಡಿದ್ದೇವೆ. ತಾವು ಹೇಳಿದಿರಿ ಅದು ಸರಿ. ನಾನು ಪದೇ ಪದೇ ಪ್ರಯತ್ನ ಮಾಡುತ್ತೇನೆ, ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಅದು ಸರಿ. ನಾನು ಇಲ್ಲ ಎಂದು ಹೇಳುತ್ತಿಲ್ಲ. ನನಗೇನೂ ಅಭ್ಯಂತರವಿಲ್ಲ. ಇದನ್ನು ಇನ್ನೂ ಒಂದು ಅಥವಾ ಒಂದೂವರೆ ಗಂಟೆ ಚರ್ಚೆ ಮಾಡಬೇಕು ಎಂದರೂ ಅವಕಾಶ ಕೊಡುತ್ತೇನೆ. ಸಹಕಾರ ಸಿಗದೇ ಇದ್ದಾಗ ನಾನು ಹೇಗೆ ಸದನವನ್ನು ನಡೆಸಬೇಕು ಎಂದು ದಯಮಾಡಿ ತಾವೆಲ್ಲರೂ ನನಗೆ ಮಾರ್ಗದರ್ಶನ ನೀಡಿ. ಜೀರೋ ಅವರ್ ಇಲ್ಲದೇ ಇದ್ದರೇ, ಜೀರೋ ಅವರ್ ಇರಬೇಕು ಎಂದು ಹೇಳುತ್ತೀರಿ. ಇಡೀ ಅವರ್ ಜೀರೋ ಅವರ್ ಆದರೆ ಹೇಗೆ? I am also one with you. I am finding it very difficult.

ಶ್ರೀ ವಾಟಾಳ್ ನಾಗರಾಜ್ :- ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು :- ದಯಮಾಡಿ ಮುಗಿಸಿ. ಅವರು ಮುಗಿಸಿ ಬಿಡಲಿ, ಎರಡು ನಿಮಿಷ ಅಷ್ಟೇ.

ವಿಷಯ :- (ಉ) ಕಪಿಲಾ ಎರಡನೇ ಹಂತದ ಕಾಮಗಾರಿಯ ಪ್ರಗತಿ ಬಗ್ಗೆ.

+ **ಶ್ರೀ ವಾಟಾಳ್ ನಾಗರಾಜ್** (ಚಾಮರಾಜ ನಗರ) :- ಮಾನ್ಯ ಅಧ್ಯಕ್ಷರೇ, ತಾವು ಅವಕಾಶಕೊಟ್ಟಿರುವುದರಿಂದ ಹೇಳುತ್ತಿದ್ದೇನೆ. ಕಪಿಲಾ ಎರಡನೇ ಹಂತದ ಬಗ್ಗೆ ನಾನು ಈಗಾಗಲೇ ನಿನ್ನೆಯೂ ಮಂತ್ರಿಗಳ ಗಮನಕ್ಕೆ ತಂದಿದ್ದೆನು. ಹಿಂದಿನ ಮುಖ್ಯ ಮಂತ್ರಿ ಗಳಾಗಿದ್ದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅವತ್ತು ಕಪಿಲಾ ಎರಡನೇ ಹಂತ ವನ್ನು ನಂಜನಗೂಡಿನ ಹತ್ತಿರ ಶಂಕು ಸ್ಥಾಪನೆ ಮಾಡಿ, ಬಹಳ ಬೇಗ ಈ ಜಲಾಶಯ ದಿಂದ ಬರತಕ್ಕಂಥ ನಾಲೆಯನ್ನು ನಾವು ತೆಗೆಯುತ್ತೇವೆ ಎಂದು ಹೇಳಿ, ಅದರಿಂದ ಸುಮಾರು ಒಂದು ಲಕ್ಷ ಜನರಿಗೆ ಅನುಕೂಲವಾಗತಕ್ಕಂಥ ಒಂದು ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿದ್ದರು, ಆ ಪ್ರಯತ್ನ ಅವತ್ತು ಶಂಕು ಸ್ಥಾಪನೆ ಆಯಿತೇ ಹೊರತು, ಶಂಕು ಸ್ಥಾಪನೆ ಆದನಂತರ ಇದನ್ನು ಯಾರೂ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈ ಬಗ್ಗೆ, ಕಪಿಲಾ ಎರಡನೇ ಹಂತವನ್ನು ಜಾರಿಗೆ ಕೊಡಬೇಕು ಎಂದು ನಿರಂತರವಾಗಿ ಬಂದ ಎಲ್ಲರೂ ಅದರ ಬಗ್ಗೆ ಒತ್ತಾಯ ಮಾಡುತ್ತಿದ್ದಾರೆ. ಈ ಕ್ಷಣದವರೆಗೂ ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ವರುಣಾ ನಾಲೆಯ ಬಗ್ಗೆ ತಾವು ಅನೇಕ ಸಲ ನೋಡಿದ್ದೀರಿ, ವರುಣಾ ನಾಲೆಯೂ ಸಹ ಈ ಯುಗದಲ್ಲಿ ಮುಗಿಯುವಂತೆ ಕಾಣುತ್ತಿಲ್ಲ. ಅದಕ್ಕೆ ಕಾರಣ ನನಗನ್ನಿಸುತ್ತದೆ, ಮೈಸೂರು ಜಿಲ್ಲೆಯ ಈ ಒಂದು ಪ್ರಮುಖವಾದಂಥ ಜಲಾಶಯಗಳಲ್ಲಿ

ಬರತಕ್ಕಂಥ ನೀರನ್ನು ಉಪಯೋಗಿಸತಕ್ಕಂಥ ನಾಲೆಗಳನ್ನು ಯಾವ ಕಾರಣಕ್ಕೆ ಕಡೆಗಾಣಿಸಿದ್ದೀರಿ? ಯಾವ ಉದ್ದೇಶದಿಂದ ಕಡೆಗಾಣಿಸಿದ್ದೀರಿ? ಕಪಿಲಾ ಎರಡನೇ ಹಂತವನ್ನು ಇವರು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದಕ್ಕೆ ಒಂದು ಸ್ಪಷ್ಟವಾದಂಥ ನಿರ್ಧಾರವನ್ನು ಹೇಳಬೇಕು. ವರುಣಾ ನಾಲೆ ಯಾವಾಗ ಮುಗಿಯುತ್ತದೆ ಎನ್ನತಕ್ಕಂಥಾದ್ದನ್ನು ಸ್ಪಷ್ಟಪಡಿಸಬೇಕು. ಸುವರ್ಣಾವತಿ ಬಗ್ಗೆ ನಾನು ಈಗಾಗಲೇ ನಿನ್ನೆಯ ದಿವಸ ಮಾನ್ಯ ಮಂತ್ರಿಗಳಿಗೆ ಬರೆದು ಕೊಟ್ಟು ರಿಪೇರಿ ಕಾರ್ಯ ಮಾಡಿಸಿ ಸಾಕು ಎನ್ನತಕ್ಕಂಥ ಮಾತನ್ನು ಚಾಮರಾಜನಗರ ತಾಲ್ಲೂಕು ಸುವರ್ಣಾವತಿ ಬಗ್ಗೆ ಕೈಮುಗಿದು ನಾನು ಪ್ರಾರ್ಥನೆ ಮಾಡಿದ್ದೇನೆ. ಕಪಿಲಾ ಎರಡನೆ ಹಂತದ ಬಗ್ಗೆ ಸರ್ಕಾರ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳಲೇ ಬೇಕು. ಒಂದೊಂದು ಸಲ ಮೈಸೂರು ಜಿಲ್ಲೆಯಿಂದ ನಾಲ್ಕೈದು ಜನ ಮಂತ್ರಿಗಳಾಗುತ್ತಾರೆ, ನಮ್ಮ ಉಪ ಮುಖ್ಯಮಂತ್ರಿಗಳೂ ಮೈಸೂರು ಜಿಲ್ಲೆಯವರೇ. ಅವರಿಗೂ ನಾನು ನೇರವಾಗಿ ಹೇಳುತ್ತಿದ್ದೇನೆ. ಈ ಬಗ್ಗೆ ತಾವು ಯಾವಾಗ ಆದನ್ನು ಮುಗಿಸುತ್ತೀರಿ? ಕಪಿಲಾ ಎರಡನೇ ಹಂತವನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣಗಳೇನು? ಏಕೆ ತೆಗೆದುಕೊಳ್ಳುವುದಿಲ್ಲ? ತಮಿಳುನಾಡಿಗೆ ನೀವು ನೀರು ಕೊಡಬಹುದು, ಆದರೆ ವರುಣಾ ನಾಲೆಗೆ ನೀರು ಕೊಡುವುದಕ್ಕೆ ನೀವು ತಯಾರಾಗಿಲ್ಲ. ತಮಿಳುನಾಡಿಗೆ ನೀರು ಕೊಡಬಹುದು, ಕಪಿಲಾ ಎರಡನೇ ಹಂತವನ್ನು ತೆಗೆದುಕೊಳ್ಳುವುದಕ್ಕೆ ನೀವು ತಯಾರಾಗಿಲ್ಲ. ಇನ್ನು ತಾರಕಾ ಏತನೀರಾವರಿ. ಯಾವ ಕಾರಣಕ್ಕೆ ತಾವು ತಾರಕಾ ಏತನೀರಾವರಿಯನ್ನು ತೆಗೆದುಕೊಳ್ಳುತ್ತಿಲ್ಲ? ಏಕೆ ತೆಗೆದುಕೊಳ್ಳುತ್ತಿಲ್ಲ. ತಾರಕಾ ಏತನೀರಾವರಿಗೆ ಹಿಂದೆ ಬಂಗಾರಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ಆದಕ್ಕೆ ಅಲ್ಲಿ ಅಡಿಗಲ್ಲನ್ನು ಹಾಕಿ ಶಂಕು ಸ್ಥಾಪನೆ ಮಾಡಿ ಆದನ್ನು ನಡೆಸಬೇಕು ಎಂದು ಒಂದು ದೊಡ್ಡ ಸಮಾರಂಭವನ್ನು ಮಾಡಿದರು. ಆದು ಅಲ್ಲಿಗೇ ಮುಗಿಯಿತು, ಹೆಗ್ಗಡದೇವನಕೋಟೆಯಲ್ಲಿ. ಆಗ ಅಲ್ಲಿ ವೆಂಕಟೇಶ್ ಶಾಸಕರಾಗಿದ್ದರು. ತಾರಕಾ ಏತನೀರಾವರಿ ಏನಿದೆ, ಅವತ್ತು ಶಂಕು ಸ್ಥಾಪನೆ ಆಯಿತು, ಇವತ್ತಿನವರೆಗೂ ಆದರ ಬಗ್ಗೆ ಏನೂ ಕ್ರಮವನ್ನು ಈ ಕ್ಷಣದವರೆಗೂ ತೆಗೆದುಕೊಳ್ಳಲಿಲ್ಲ. ಇದು ಸರಿಯಾದ ನೀತಿಯಲ್ಲ. ಪಿರಿಯಾಪಟ್ಟಣ ಏತನೀರಾವರಿ ಮತ್ತು ಹುಣಸೂರಿನ ತಾರಕಾ ಇವೆರಡರ ಬಗ್ಗೆ ಮೈಸೂರು ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದೀರಿ. ನಾನು ಒಂದು ಜಿಲ್ಲೆಯ ಬಗ್ಗೆ ಮಾತನಾಡುತ್ತೇನೆ ಎಂದು ತಿಳಿದು ಕೊಳ್ಳಬೇಡಿ. ಇದು ಸಮಗ್ರ ಕರ್ನಾಟಕದ ಬಗ್ಗೆ ಮಾತನಾಡತಕ್ಕಂಥ ವರ್ಷ. ಆದರೆ ನಾನು ಮನನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಕಪಿಲಾ ಎರಡನೇ ಹಂತವನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ತಾವು, ತಮ್ಮ ಕಾಲದಲ್ಲಾದರೂ, ಹಿಂದೆ ಇದ್ದಂಥ ತಮ್ಮ ನಾಯಕರಾಗಿದ್ದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಶಂಕು ಸ್ಥಾಪನೆ ಮಾಡಿರತಕ್ಕಂಥಾದ್ದನ್ನು, ನಾವು ತಮಗೆ ಏನು ಹೇಳುತ್ತೇನೆ ಎಂದರೆ ತಮ್ಮ ಕಾಲದಲ್ಲಾದರೂ ಇದನ್ನು ಮುಗಿಸುವುದಕ್ಕೆ ಪ್ರಯತ್ನವನ್ನು ನಾವು ಮಾಡುತ್ತೇವೆ ಎನ್ನುವ ಭರವಸೆ ಕೊಟ್ಟರೆ ನನಗೆ ನಿಜವಾಗಲೂ ಬಹಳ ಸಂತೋಷವಾಗುತ್ತದೆ ತಾರಕಾ, ಕಪಿಲಾ ಎರಡನೇ ಹಂತ, ವರುಣಾ ನಾಲೆ ಮತ್ತು ಪಿರಿಯಾಪಟ್ಟಣ ಏತನೀರಾವರಿ ಇಷ್ಟನ್ನೂ ತಾವು ಮಾಡಬೇಕು. ವರುಣಾ ನಾಲೆಯದ್ದು ತೊಂದರೆ ಇಲ್ಲ ಎಂದು ಹೇಳುತ್ತೀರಿ. ಅಲ್ಲಿ ಏನೂ ಆಗಿಲ್ಲ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು) :- ಅಧ್ಯಕ್ಷರೇ, ಹೋದ ವರ್ಷ ವರುಣಾ ನಾಲೆಗೆ ಬಜೆಟ್‌ನಲ್ಲಿ 32 ಕೋಟಿ ರೂಪಾಯಿಗಳನ್ನು ಇಟ್ಟಿದ್ದು ಅದರಲ್ಲಿ ಸುಮಾರು 20 ಕೋಟಿ ರೂ. ಹೆಚ್ಚು ರೂಪಾಯಿಗಳನ್ನು ವಿರ್ಚುಮಾಡಿದ್ದೇವೆ. ಹಿಂದೆ ಯಾವ ವರ್ಷವೂ ಅಷ್ಟು ಹಣ ವಿರ್ಚಾಗಿರಲಿಲ್ಲ. ಹಿಂದೆ ಎಷ್ಟು ವಿರ್ಚಾಗಿತ್ತು ಎಂದರೆ 11-12 ಕೋಟಿ ರೂಪಾಯಿಗಳು ವಿರ್ಚಾಗಿತ್ತು. ಈ ವರ್ಷವೂ ಕೂಡ 32 ಕೋಟಿ ರೂಪಾಯಿಗಳನ್ನೂ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೇವೆ. ಮತ್ತು ಅಲ್ಲಿ ಕೆಲಸ ಬಹಳ ವೇಗದಿಂದ ನಡೆಯುತ್ತಿದೆ. ತಾರಕಾದ್ದೂ ಕೂಡ ಕಬಿನಿ ಬ್ಯಾಕ್ ವಾಟರ್‌ನಿಂದ ಲಿಫ್ಟ್ ಮಾಡಬೇಕು. ಏಕೆಂದರೆ ಕ್ಯಾಚ್‌ಮೆಂಟ್ ಏರಿಯಾದಲ್ಲಿ ನೀರು ಇಲ್ಲ. ತಾರಕಾ ಕೊಟ್ಟು ಬಿಟ್ಟರೆ ನೀರು ಬರುತ್ತಿಲ್ಲ, ಶೇಖರಣೆ ಆಗುತ್ತಿಲ್ಲ. ಆದಕ್ಕೋಸ್ಕರ ಕಬಿನಿಯಿಂದ ಬ್ಯಾಕ್ ವಾಟರ್‌ನ್ನು ಲಿಫ್ಟ್ ಮಾಡಿ ತಾರಕಾಗೆ ಬಿಡಬೇಕಾಗುತ್ತದೆ. ಅದರ ಬಗ್ಗೆ ಕೂಡ ಸರ್ಕಾರ ಈಗ ಪರಿಶೀಲನೆ ಮಾಡುತ್ತಿದೆ.

(ಊ) ಶೂನ್ಯ ವೇಳೆ ಬಗ್ಗೆ ಚರ್ಚೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು ಪಾಯಿಂಟ್ ಆಫ್ ಆರ್ಡರ್. ನಾನು ಒಬ್ಬ ಹೊಸ ಸದಸ್ಯ. ಜೀರೋ ಅವರ್‌ನಲ್ಲಿ ನಿನ್ನೆ ಅಥವಾ ಇವತ್ತು ಸಂಭವಿಸಿದ ಘಟನೆ ಬಗ್ಗೆ ತುರ್ತು ಪರಿಹಾರ ಪಡೆಯುವುದಕ್ಕೆ ಜೀರೋ ಅವರ್ ಇರುವುದು ಎಂದು ನನ್ನ ಭಾವನೆ. ಜೀರೋ ಅವರ್‌ನಲ್ಲಿ ಯಾವುದಾದರೂ ಪ್ರಶ್ನೆ ಕೇಳಬಹುದೇ ಸಭಾಧ್ಯಕ್ಷರೇ ಅಥವಾ ಯಾವುದನ್ನು ಕೇಳಬೇಕು ಎಂಬ ಬಗ್ಗೆ ನಮಗೆ ಮಾರ್ಗದರ್ಶನ ನೀಡಬೇಕು.

ಅಧ್ಯಕ್ಷರು :- ಒಬ್ಬ ಕಿರಿಯ ಸದಸ್ಯರು ಇದನ್ನು ಪಾಯಿಂಟ್‌ಔಟ್ ಮಾಡಿದ್ದಾರೆ. ಸದನದಲ್ಲಿ ಜೀರೋ ಅವರ್ ಎಂದು ಇರತಕ್ಕಂಥಾದ್ದು, ನಿನ್ನೆ ಸದನ ಮುಕ್ತಾಯವಾಗಿ ಇವತ್ತು ಸದನ ಪ್ರಾರಂಭವಾಗುವುದರೊಳಗಾಗೆ ನಡೆದಿರಬಹುದಾದಂಥ ಯಾವುದಾದರೂ ಒಂದು ಘಟನೆಯಿದ್ದು, ನೋಟೀಸ್ ಕೊಡುವುದಕ್ಕೆ ನಿಯಮಾವಳಿಗಳ ಪ್ರಕಾರ ಸಮಯಾವಕಾಶ ಇಲ್ಲದೇ ಇದ್ದು, ಬೇರೆ ರೀತಿಯಲ್ಲಿ ತರಲಿಕ್ಕೆ ಆಗದೇ ಇದ್ದು, ಸಾರ್ವಜನಿಕವಾಗಿ ಮಹತ್ವದ್ದು ಆಗಿದ್ದರೆ ಸರ್ಕಾರದ ಗಮನವನ್ನು ತುರ್ತಾಗಿ ಸೆಳೆಯುವುದಕ್ಕೆ ಆ ಘಟನೆಯನ್ನು ಪ್ರಸ್ತಾಪ ಮಾಡುವುದಕ್ಕೆ ಸೀಮಿತವಾಗಿ ಉಪಯೋಗಿಸಕೊಳ್ಳಬೇಕು. ಇದು ಎಲ್ಲರಿಗೂ ಗೊತ್ತಿರಬೇಕು ಎಂದು ನಾನು ತಿಳಿಸುವ ಪ್ರಯತ್ನ ಮಾಡುತ್ತೇನೆ, ವಿನಂತಿ ಮಾಡುತ್ತೇನೆ. ಉಳಿದಂತೆ ನಾನು ಏನು ಮಾಡುತ್ತೇನೆ ಹೇಳಿ? ನಾನೂ ಸ್ವಲ್ಪ ಸಮಯದಲ್ಲಿ ಅಸಹಾಯಕನಾಗುತ್ತೇನೆ. ನೀವು ಎತ್ತಿ ಹಿಡಿದಿರತಕ್ಕಂಥ ಯಾವ ಕ್ರಿಯಾಲೋಪ ಇದೆ, ತಾವು ತಿಳಿದುಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು :- ನೀವು ಅಸಾಹಯಕರಾಗಬಾರದು. ನೀವು ಅಸಹಾಯಕರಾದರೆ ಬಹಳ ಮಹತ್ವದ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅನಾನುಕೂಲವಾಗುತ್ತದೆ.

ಅಧ್ಯಕ್ಷರು :- ನಾನು ಹೇಳುವುದನ್ನು ಕೇಳಿ. ಕಿರಿಯ ಸದಸ್ಯರಾದರೆ ಸ್ವಲ್ಪ ಧ್ವನಿ ಏರಿಸಿ ಮಾಡಬಹುದು. ಎಲ್ಲಾ ತಿಳಿದಂಥವರೂ ಕೂಡ ಎಲ್ಲಾ ವಿಚಾರಗಳನ್ನು ಎಲ್ಲಾ